Reg No B G 155 19-2-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆರತುಕಟ್ಟೆ ಜಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶಿವಸೇನೆ ಪ್ರತಿಬಂಧಿಸಲ್ಪಡಬೇಕು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮುನಿಸಿಪಲ್ ಪ್ರಕಟಣೆ

ಮೈಸೂರು— ಪಬ್ಲಿಕ್ ಲೈಬ್ರೆರೀಸ ಆಕ್ಟ ಪ್ರಕಾರ ಏಪ್ರಿಲ್ 1 ರಿಂದ ತೆರಿಗೆಗಳ ಮೇಲೆ ರೂಪಾಯಿಗೆ 3 ಪೈಸೆ ಸರ್ಚಾರ್ಜು ವಸೂಲ್ಮಾಡಲಾಗುವುದೆಂದು ಮುನಿಸಿಪಲ್ ಕಮಿಷನರರು ತಿಳಿಸಿದ್ದಾರೆ.

●

ಹಿತಬೋಧೆ

ಬಾಗಲಕೋಟೆ— ಕಂದಾಯ ಮಂತ್ರಿ ಶ್ರೀ ಹೆಚ್. ವಿ. ಕೌಜಲ್ಗಿಯವರು ಹರ್ಷಗಾಡಿನ ವಿಜಯ ಮಹಂತೇಶ ಹೈಸ್ಕೂಲಿನ ವಿದ್ಯಾರ್ಥಿಗಳನ್ನು ಕುರಿತು ಮಾಡಿದ ಭಾಷಣದಲ್ಲಿ— ವಿದ್ಯಾರ್ಥಿಗಳು ರಾಜಕೀಯ ತಂಟಿಗೆ ಹೋಗಬಾರದೆಂದೂ, ಕಷ್ಟಪಟ್ಟು ಓದಿ, ತಂದೆತಾಯಿಗಳಿಗೆ ಮತ್ತು ಉಪಾಧ್ಯಾಯರಿಗೆ ವಿಧೇಯರಾಗಿರಬೇಕೆಂದೂ ತಿಳಿಸಿದರು — ಇಳ್ಕಲ್ ಕಾಲೇಜು ವಿದ್ಯಾರ್ಥಿಗಳನ್ನು ಕುರಿತ ಭಾಷಣವಲ್ಲಿ, ಶಿಸ್ತಿನಿಂದಿದ್ದು ಐಕ್ಯತೆಗೆ ಕಾರ್ಯ ನಡೆಸಬೇಕೆಂದೂ ತಿಳಿಸಿದರು.

ನಹನಗಟ್ಟೆ ಗರ್ಭಸ್ರಾವ ನಡೆಸಿದವ

ಚಿತಾಗೊ— ಗರ್ಭಸ್ರಾವ ಸಮ್ಮೇಳನದಲ್ಲಿ ಗರ್ಭಸ್ರಾವ ಶಾಸನಬದ್ಧವಾಗಿರುವ ಗರ್ಭಸ್ರಾವ ನಡೆಸಿದ ಆರೋಪಣೆಗೆ ಗುರಿಯಾಗಿರುವ ಡಾ|| ನಾರ್ಥ್, ತಾನು 1926 ರಲ್ಲಿ ಆರ್ಕನಾಸ್ ವಿಶ್ವವಿದ್ಯಾಲಯದಲ್ಲಿನ ಪದವಿಧರನಾದಾರಭ್ಯ ತನ್ನ ಚಿಕಿತ್ಸಾಲಯದಲ್ಲಿ 30000 ಗರ್ಭಸ್ರಾವ ನಡೆಸಿ ಪ್ರತಿಯೊಂದಕ್ಕೂ 500 ಡಾಲರು ಪಡೆದಿರುವುದಾಗಿ ಹೇಳಿದನು — ತಾನು ಈ ಸಂದರ್ಭದಲ್ಲಿ 9 ವರ್ಷ ಜೈಲುವಾಸ ಅನುಭವಿಸಿರುವುದಾಗಿ ಹೇಳಿದನು.

★

ರಫ್ತು

ನವದೆಹಲಿ— 1968 ನೇ ಇಸವಿಯಲ್ಲಿ ಆದ ರಫ್ತು ರೂ. 1314.55 ಕೋಟಿಗಳಷ್ಟಾಗಿದೆ.

ಕೈಗಾರಿಕೆಗಳ ಸ್ಥಾಪನೆ ಹುಮ್ಮಸ್ಸು

ಶಿವಮೊಗ್ಗ— ಚೇಂಬರ್ ಆಫ್ ಕಾಮರ್ಸ್ ಕಟ್ಟಡದ ಶಿಲಾನ್ಯಾಸ ನೆರವೇರಿಸುತ್ತಾ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು— ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆ ಹುಮ್ಮಸ್ಸಿಗೆ ಕೊರತೆಯಿರುವುದನ್ನು ಖಂಡಿಸಿ, ಧನವಂತರು ಹೆಚ್ಚು ಕೈಗಾರಿಕೆ ಸ್ಥಾಪನೆಗೆ ಮುಂದೆ ಬರಬೇಕೆಂದೂ ಕೋರಿದರು: ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸುವವರಿಗೆ ವಿದ್ಯುಚ್ಛಕ್ತಿಯಲ್ಲಿ ರಿಯಾಯಿತಿ ಕೊಡಲಾಗುವುದೆಂದರು ; ಸರಕಾರವು ಮಾರಾಟ ತೆರಿಗೆ ಪುನರ್ವಿಮರ್ಶೆ, ಅಕ್ಕಾಯಿ ವಜಾ ವಿಷಯ ಪರಿಶೀಲಿಸುತ್ತಿದೆಯೆಂದೂ ತಿಳಿಸಿದರು.

ಗಿಡಗಳನ್ನು ರಕ್ಷಿಸಿ

ಶಿವಮೊಗ್ಗ— ಅರಣ್ಯ ಮಂತ್ರಿ ಶ್ರೀ ಆಲೂರು ಹನುಮಂತಪ್ಪನವರು, ಸರ್ಕಾರಿ ಮರ ಕೊಯ್ಯುವ ಗಿರಣಿ ಕಾರ್ಮಿಕರ ಸಭೆಯಲ್ಲಿ ಭಾಷಣ ಮಾಡುತ್ತಾ— ಅರಣ್ಯ ಶಾಖೆಯು ರೈಲ್ವೇಗಳಿಗೆ ಸ್ಲೀಪರ್ (ಕಂಬಿಕೆಳಗಿನ ಮರದ ತುಂಡು) ಗಳನ್ನೂ, ಕಾಗದ ಕಾರ್ಖಾನೆಗಳಿಗೆ ಬೊಂಬನ್ನೂ ರೆಯ್ಯಲ್ ಕೈಗಾರಿಕೆಗೆ ಎಕ್ಕುಲ್ಲಿಪ್ಟಸ್ಸನ್ನೂ ಸರಬರಾಜು ಮಾಡುತ್ತಿದೆ; ಜನರು ಗಿಡಗಳನ್ನು ರಕ್ಷಿಸಿ, ಸೌದೆಯ ಬಡಲು ವಿದ್ಯುಚ್ಛಕ್ತಿ ಉಪಯೋಗಿಸಿಕೊಳ್ಳಬೇಕೆಂದು ಹೇಳಿದರು.

ಮುದ್ರಣದ ತೊಂದರೆ

ಧಾರವಾಡ— ಬಡ್ಜೆಟ್ಟಿನ ಮುದ್ರಿತ ಪ್ರತಿಗಳುಸಿದ್ಧವಾಗಿರದಿದ್ದುದರಿಂದ, ಹಬ್ಲಿ ಧಾರವಾಡ ಮುನಿಸಿಪಲ್ ಕಾರ್ಪೊರೇಷನ್ ಅಧಿವೇಶನ ಮುಂದಕ್ಕೆ ಹಾಕಲ್ಪಟ್ಟಿತು.

★

ಪ್ರತಿಬಂಧಿಸಲ್ಪಡಬೇಕು

ಧಾರವಾಡ— ಶಿವಸೇನೆಯಂಥ ಸಂಸ್ಥೆಗಳ ಸ್ಥಾಪನೆಗೆ ತಾವು ವಿರೋಧವೆಂದೂ, ಶಿವಸೇನೆ ಪ್ರತಿಬಂಧಿಸಲ್ಪಡಬೇಕೆಂಬುದು ತಮ್ಮ ಅಭಿಪ್ರಾಯವೆಂದೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿದರು

○

ವ್ಯಾರ್ಗ ಸರಬರಾಜು

ನವದೆಹಲಿ— ಪೋಲೆಂಡಿಗೆ 500 ರೈಲ್ವೇ ವ್ಯಾರ್ಗ ಸರಬರಾಜು ಮಾಡುವ ಒಪ್ಪಂದಕ್ಕೆ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿನ್ನೆ ಅಂಕಿತ ಹಾಕಿತು.

●

ವಿದೇಶೀ ಸಾಲ

ನವದೆಹಲಿ— 1968 ನೇ ನವೆಂಬರ್ 1 ರಲ್ಲಿ ಬಾಕಿ ಇರುವ ವಿದೇಶೀ ಸಾಲ ರೂ. 5801.8 ಕೋಟಿಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಟಕೀಟಿಲ್ಲದ ಪ್ರಯಾಣ

ನವದೆಹಲಿ— ಟಕೀಟಿಲ್ಲದ ಪ್ರಯಾಣಿಕರಿಂದ ವರ್ಷಕ್ಕೆ ರೂ. 20 ಕೋಟಿಯಿಂದ ರೂ. 25 ಕೋಟಿ ವರಿಗೆ ನಷ್ಟವಾಗುತ್ತಿರುವದೆಂದು ಲೋಕಸಭೆಯಲ್ಲಿ ತಿಳಿಸಲಾಯ್ತು

★

ದಾಖಲೆ ಸೈಕಲ್ ಸವಾರಿ

ಡಾಕಾರ್— ಇಲ್ಲಿಯ ಸ್ಟೇಡಿಯಂನಲ್ಲಿ ಭಾರತೀಯ ಸೈಕಲ್ ಸವಾರ ಮಹಮದ್ ನೆವಾದ್ 100 ಗಂಟೆಗಳ ಕಾಲ ನಿರಂತರ ಸೈಕಲ್ ಸವಾರಿ ಮಾಡಿ ವಿಶ್ವ ದಾಖಲೆ ಸ್ಥಾಪನೆ ಮಾಡಿದನು — ಊಟ, ಮುಖ ತೊಳೆಯುವುದು, ಕಾರ ಮಾಡಿಕೊಳ್ಳುವುದು, ಎಲ್ಲಾ ಸೈಕಲ್ ಮೇಲೆ — ಸೈಕಲ್ಲಿಂದ ಇಳಿದೊಡನೆ ಘಾಢನಿದ್ರೆ ಹೋದರು.

(2)

ಎಂತಹ ದುರಂತ

ಲಂಡನ್— ಬಹುಮಾನ ವಿನಿಯೋಗ ಮಾಡುತ್ತಿದ್ದ ಮೇರಿಯೋ ಹಾಸ್ಯಗಾರ ಕೆನೆತ್ ಕುಸಿದು ಮೂರು ಅಡಿ ಕೆಳಕ್ಕೆ ಬಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ಮೃತಪಟ್ಟನು.

———

ಮೈಸೂರು ದೇಶದ ಭೂಮಾಲೀಕರುಗಳಿಗೆ ಸಂಬಂಧಪಟ್ಟ ಪ್ರಕಟಣೆ

ಭೂಮಾಲೀಕರುಗಳು ತಮಗೆ ಯಾವ ವಿಧವಾದ ತೊಂದರೆಗಳಾಗುತ್ತಿವೆ ಮತ್ತು ಇವುಗಳನ್ನು ಯಾವ ರೀತಿ ಪರಿಹರಿಸಿಕೊಳ್ಳಬೇಕು ಎಂಬ ವಿಷಯವನ್ನು ಚರ್ಚಿಸಲು ಇದೇ ಮಾಹೆ ತಾ|| 20–2–69 ನೇ ಗುರುವಾರ ಸಾಯಂಕಾಲ 5 ಗಂಟೆಗೆ ಚಾಮರಾಜ ಡಬ್ಬಲ್ ರೋಡ್‌ನಲ್ಲಿರುವ ಸಹಕಾರ ಭವನದಲ್ಲಿ ಎಲ್ಲಾ ಭೂಮಾಲೀಕರುಗಳೂ ಸಭೆಸೇರಲು ನಿರ್ಧರಿಸಿದ್ದೇವೆ. ಮೈಸೂರು ರಾಜ್ಯ ವಿಧಾನಸಭಾ ಸದಸ್ಯೆ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಅಧ್ಯಕ್ಷತೆ ವಹಿಸಲು ದಯೆಯಿಟ್ಟು ಒಪ್ಪಿರುತ್ತಾರೆ. ತಾವುಗಳೆಲ್ಲರೂ ಇದರಲ್ಲೇ ಅತ್ಯವಶ್ಯವೆಂದು ಭಾವಿಸಿ ಸಭೆಗೆ ದಯಮಾಡಿಸಿ ಚರ್ಚೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ಕೊಟ್ಟು ಈ ಮಹತ್ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿ ಪ್ರಾರ್ಥನೆ.

Help The Gorakshana

All India Blind Welfare Week

(Shivo-Chaturdasi Week)

16 th February — 22 nd February 1969

FLAG DAY on 21 st February 1969

— HELP THE HELPLESS BLIND —

Sponsored by :

Netaji Eye & General Hospital

P. O. Ramachandrapur Ashram, Dist. Purulia (W. B)

Protect the Cow

ಅಶೋಕ ಪಿಚ್ಚರ್ಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಬೆಂಗಳೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುತ್ತವೆ

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯಿಸಿ ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಅಪೆರಾ— ಜನವರಿಯ 4 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharee Nirata M S Krishna Rao (Proprietor) at the Satyavadi Press Chamarajapuram, Mysoe 4